## ಕರ್ನಾಟಕ ಸರ್ಕಾರ

ಸಂಖ್ಯೆ: ಒಇ 113 ಪಿಸಿಆರ್ 93.

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 22-12-94.

## ಸುತ್ತೋಲೆ

ವಿಷಯ:- ರಾಜ್ಯದಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ಮೇಲಿನ ದೌರ್ಜನ್ಯ ತಡೆಗಟ್ಟುವ ಬಗ್ಗೆ.

---

ರಾಜ್ಯದ ಕೆಲವು ನಗರಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಹರಿಜನ:ಗಿರಿಜನರಿಗೆ ದೇವಾಲಯಗಳಲ್ಲಿ ಪ್ರವೇಶ ನಿಷೇಧಿಸಿರುವುದು, ಹೋಟೆಲುಗಳಲ್ಲಿ ಲೋಟಗಳನ್ನು ಹೊರಗಡೆ ಇಡುವ ಪದ್ಧತಿ ಕಲ್ಪಿಸಿರುವುದು ನೀರಿನ ಬಾವಿ ಮತ್ತು ಕೊಳವೆ ಬಾವಿಗಳಿಗೆ ಸೇರಿಸದೇ ಇರುವುದು, ಮದುವೆ ಸಮಾರಂಭಗಳಲ್ಲಿ, ಧಾರ್ಮಿಕ ಸಮಾರಂಭಗಳಲ್ಲಿ, ಕ್ಷೌರಿಕಾಂಗಡಿಗಳಲ್ಲಿ ಮತ್ತು ಕೆಲವು ಹೋಟೆಲುಗಳಲ್ಲಿ ಎಂಜಲು ತಿನ್ನಿಸುವುದು, ಸಾರ್ವಜನಿಕ ಸಮಾರಂಭಗಳಲ್ಲಿ ಜಾತಿ ಪಂಕ್ತಿಗಳಲ್ಲಿ ಬೇರೆಯ ವ್ಯಕ್ತಿಗಳಿಗೆ ನೀಡುವ ಇಂತಹ ಶೋಷಣಾ ಕೃತ್ಯಗಳನ್ನು ನಡೆಸುತ್ತಿರುವಂತಹ ಅಸ್ಪೃಶ್ಯತಾ ದೌರ್ಜನ್ಯಗಳ ಬಗ್ಗೆ ದೂರುಗಳು ಕೇಳಿ ಬಂದಿದೆ.

ಇಂತಹ ಸಂದರ್ಭಗಳನ್ನು ತಡೆಗಟ್ಟಲು ನಾಗರೀಕ ಹಕ್ಕು ಸಂರಕ್ಷಣಾ ಕಾಯಿದೆ 1955 ಹಾಗೂ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಮೇಲಿನ ದೌರ್ಜನ್ಯ ನಿಯಂತ್ರಣಾ ಕಾಯಿದೆ 1989ರ ಅಡಿಯಲ್ಲಿ ಅವಶ್ಯವಿದ್ದ ಕ್ರಮ ಕೈಗೊಳ್ಳಬೇಕಾಗಿದೆ. ಪದೇ ಪದೇ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಮೇಲೆ ದೌರ್ಜನ್ಯ ಶೋಷಣೆ ನಡೆಯುತ್ತಿರುವಂತಹ ದೂರುಗಳು ಸರ್ಕಾರಕ್ಕೆ ಬರುತ್ತಿರುವುದರಿಂದ ಇದರ ಬಗ್ಗೆ ನಿಮ್ಮ ವೈಯಕ್ತಿಕ ಗಮನವನ್ನು ಹರಿಸಬೇಕಾಗಿದೆ.

ಈ ದಿಶೆಯಲ್ಲಿ ನಾಗರೀಕ ಹಕ್ಕು ಸಂರಕ್ಷಣಾ ಕಾಯಿದೆ 1955 ಹಾಗೂ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಜನರ ಮೇಲಿನ ದೌರ್ಜನ್ಯ ನಿಯಂತ್ರಣಾ ಕಾಯಿದೆ 1989ರಡಿ ಅಸ್ಪೃಶ್ಯತಾ ನಿವಾರಣೆ ಹಾಗೂ ದೌರ್ಜನ್ಯ ತಡೆಗಟ್ಟುವ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ಪೋಲೀಸ್ ಆಯುಕ್ತರು ಹಾಗೂ ಅಧೀಕ್ಷಕರುಗಳಿಗೆ ಅವಶ್ಯವಿದ್ದ ಕ್ರಮ ಕೈಗೊಳ್ಳಲು ಮತ್ತೊಮ್ಮೆ ಸೂಚನೆ ನೀಡಲಾಗಿದೆ.

ಸಹಿ·(ಎಸ್· ಶಂಕರಲಿಂಗೆ ಗೌಡ),
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಮತ್ತು ಸಾರಿಗೆ ಇಲಾಖೆ(ಅಪರಾಧಗಳು)

ಸಂಖ್ಯೆ: ಎಂಎಜಿ 640:94-95.

ಹಾಸನ, ದಿನಾಂಕ 31-1-1995.

ಜಿಲ್ಲೆಯ ಎಲ್ಲಾ ... ವಿಭಾಗಾಧಿಕಾರಿಗಳು ಹಾಗೂ ತಹಸೀಲ್ದಾರರವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

ಜಿಲ್ಲಾಧಿಕಾರಿಗಳ ಪರವಾಗಿ,
ಹಾಸನ ಜಿಲ್ಲೆ, ಹಾಸನ.

ಅಕ :